## ಶಾಂತಿಯ ಜೊತೆಗೆ...

ರಾಜೇಶ ಕೇಳಿದ, 'ಯಾಕೊ ನಿನ್ನೆ ಬೆಳಿಗ್ಗೆ ವಾಕಿಂಗ್ ಬರಲಿಲ್ಲ?' ಎಂದು. ಪರಮೇಶಿ ಹೇಳಿದ, 'ರಾಜೇಶ, ನಿನ್ನೆ ಶಾಂತಿಗಾಗಿ ದೇವಸ್ಥಾನಕ್ಕೆ ಹೋಗಿದ್ದೆ ಕಣೋ...' ಎಂದು. 'ಶಾಂತಿ ಸಿಕ್ತೇನೊ?' ಎಂದ ರಾಜೇಶ. ಪರಮೇಶಿ, 'ಇನ್ನೇನು ಶಾಂತಿ ಬರುವ ಸಮಯವಾಗಿತ್ತು, ಅಷ್ಟರಲ್ಲಿ ಕವಿತಾ, ನಿವೇದಿತಾನು ಬಂದು ಬಿಟ್ರು ಕಣೋ! ಗಾಬರಿಯಾಗಿ ತಕ್ಷಣವೇ ಅಲ್ಲಿಂದ ಹೊರಟು ಬಂದೆ' ಎಂದ.

**ಮಹಾಂತೇಶ ಬಾಗೇವಾಡಿ**





## ಟ್ಯಾಕ್ಸಿ ಓಡಿಸಿದ್ದು ಇದೇ ಮೊದಲು

ಗಾಳಿಯನ್ನು ಸೀಳಿಕೊಂಡು ಟ್ಯಾಕ್ಸಿ ಓಡುತ್ತಿತ್ತು. ಹಿಂದಿನ ಸೀಟಿನಲ್ಲಿ ಕುಳಿತಿದ್ದ ಪ್ಯಾಸೆಂಜರ್ ಚಾಲಕನಿಗೆ ಏನೋ ಹೇಳಬೇಕೆಂದು ಆತನ ಭುಜದ ಮೇಲೆ ಕೈ ಇಟ್ಟ. ಅಷ್ಟಕ್ಕೇ ಹೌಹಾರಿದ ಆ ಟ್ಯಾಕ್ಸಿ ಚಾಲಕ ನಿಯಂತ್ರಣ ಕಳೆದುಕೊಂಡು ಫುಟ್ ಪಾತ್ ಮೇಲಿದ್ದ ವಿದ್ಯುತ್ ಕಂಬಕ್ಕೆ ಢಿಕ್ಕಿ ಹೊಡೆದ. ಸದ್ಯ ಯಾರಿಗೂ ಏನಾಗಲಿಲ್ಲ. ಕೆಳಗೆ ಇಳಿದು ಬಂದ ಪ್ಯಾಸೆಂಜರ್ ಸೌಜನ್ಯಕ್ಕೆ ಆ ಚಾಲಕನ ಬಳಿ ಬಂದು, 'ದಯವಿಟ್ಟು ಕ್ಷಮಿಸು... ನಿನ್ನ ಭುಜದ ಮೇಲೆ ಕೈಯಿಟ್ಟು ಮಾತನಾಡಿದ್ದಕ್ಕೆ ಹೀಗೆಲ್ಲಾ ಆಯ್ತು' ಎಂದ. ಆಗ ಚಾಲಕ, 'ಸ್ವಾಮಿ... ಇದರಲ್ಲಿ ನಿಮ್ಮ ತಪ್ಪೇನಿಲ್ಲ, ನಾನು ಇದೇ ಮೊದಲ ಬಾರಿ ಟ್ಯಾಕ್ಸಿ ಓಡಿಸಿದ್ದು, ಮೊದಲು ಹೆಣ ಸಾಗಿಸುವ ವಾಹನ ಓಡಿಸುತ್ತಿದ್ದೆ. ಅದಕ್ಕೇ ಹೀಗಾಯ್ತು' ಎಂದ.

**ಅರವಿಂದ ಜಿ.ಜೋಷಿ**

**ಕಲೆ: ಗಣೇಶ ಆಚಾರ್ಯ**